

# ಭಾಷಾ ಕೌಶಲ ಬೆಳೆಸುವುದು ಹೀಗೆ...

■ ಸವಿತಾ ಮಾಧವ ಶಾಸ್ತ್ರಿ

ವರ್ಷವಿಡೀ ಓದಿ, ಬರೆದು ಪರೀಕ್ಷೆ ಎದುರಿಸಿ ಬಸವಳಿದ ಮಕ್ಕಳ ಮನಸ್ಸು ದಣಿದಿರುತ್ತದೆ. ಆದರೆ ಮಕ್ಕಳು ದಿನವಿಡೀ ಟಿ.ವಿ., ಮೊಬೈಲ್ ದಾಸರಾದರೆ ಹೆತ್ತವರಿಗೆ ಆತಂಕ ಸಹಜ. ರಜಾ ಸಮಯವನ್ನು ಅವರಲ್ಲಿರುವ ಕಲಿಕಾ ನ್ಯೂನತೆಯನ್ನು ಸರಿಪಡಿಸಲು ಪೋಷಕರು ಬಳಸಿಕೊಂಡರೆ ಅದು ಅವರಲ್ಲಿ ಬಹಳಷ್ಟು ಬದಲಾವಣೆ ತರಬಹುದು.

ಹಾಗಾದರೆ ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಹೇಗೆಲ್ಲಾ ಹೆಚ್ಚಿಸಬಹುದು ನೋಡೋಣ.

- ಕೆಲವು ಮಕ್ಕಳು ಓದುವುದಕ್ಕೆ ಬಹಳ ಕಷ್ಟಪಡುತ್ತಿರುತ್ತಾರೆ. ಒಂದು ಪ್ಯಾರಾಗ್ರಾಫ್ ಓದುವಾಗಲೂ ಹತ್ತಾರು ಬಾರಿ ತಪ್ಪು ಉಚ್ಚಾರ ಮಾಡುತ್ತಾರೆ. ಅಕ್ಷರಗಳನ್ನು ಗುರುತಿಸಲು ಪರದಾಡುತ್ತಾರೆ. ಓದಲು ಬಾರದ ಮಕ್ಕಳು ಸಹಜವಾಗಿಯೇ ಓದಿನಲ್ಲಿ ಆಸಕ್ತಿ ಕಳೆದುಕೊಳ್ಳುತ್ತಾರೆ ಮತ್ತು ಇತರರಿಂದ ಗೇಲಿಗೊಳಗಾಗಿ ಕೀಳರಿಮೆ ಬೆಳೆಸಿಕೊಳ್ಳುತ್ತಾರೆ. ಮಕ್ಕಳಿಗೆ ಸರಿಯಾಗಿ ಓದಲು, ಬರೆಯಲು ಕಲಿಸಬೇಕಾದರೆ ಅವರಿಗೆ ಕೂರಿಸಿ ಪ್ರತಿದಿನ ಕನಿಷ್ಠ ಒಂದು, ಎರಡು ಪುಟಗಳನ್ನು ಓದಿಸಿ. ಪಠ್ಯಪುಸ್ತಕವೇ ಇರಬೇಕೆಂದಿಲ್ಲ. ದಿನಪತ್ರಿಕೆ, ಕಥೆ ಪುಸ್ತಕ, ವಾರಪತ್ರಿಕೆ ಇವುಗಳಲ್ಲಿ ಉತ್ತಮ ಲೇಖನ ಆಯ್ದು ಮಕ್ಕಳಿಗೆ ಓದಲು ಹೇಳಿ. ಅವರು ತಪ್ಪಿದಲ್ಲೆಲ್ಲ ತಿದ್ದಿ ಹೇಳಿ ಓದುವಿಕೆಯನ್ನು ಸುಧಾರಿಸಬಹುದು.
- ಮಕ್ಕಳಿಗೆ ಪ್ರತಿ ದಿನ ಅವರ ವಯಸ್ಸಿಗೆ ಅನುಗುಣವಾಗಿ ಒಂದಿಷ್ಟು ಕನ್ನಡ ಮತ್ತು ಆಂಗ್ಲ ಭಾಷೆಯ ಉಕ್ತಲೇಖನ (ಡಿಕ್ಟೇಶನ್) ಬರೆಯಲು ಹೇಳಿ. ಒಂದು ಪದಕ್ಕೆ ಒಂದು ಅಂಕದಂತೆ ಹತ್ತು ಅಥವಾ ಇಪ್ಪತ್ತು ಪದಗಳ ಸಣ್ಣ ಪರೀಕ್ಷೆ ಮಾಡಿ. ಪ್ರಾರಂಭದಲ್ಲಿ ಕಡಿಮೆ ಅಂಕ ಬಂದರೆ ಬೈಯುವ ತಪ್ಪು ಮಾಡಬೇಡಿ. 'ಪರವಾಗಿಲ್ಲ. ಮುಂದಿನ ಸಲ ಜಾಸ್ತಿ ಅಂಕ ಪಡೆಯಲಿಕ್ಕೆ ಪ್ರಯತ್ನಿಸು' ಎಂದು ಹುರಿದುಂಬಿಸಿ. ತಪ್ಪಾದ ಪದಗಳನ್ನು ಪುನಃ ಐದು ಸಲ ಬರೆದು ಕಲಿಯಲು ತಿಳಿಸಿ. ಹೀಗೆ ಮಾಡುತ್ತಾ ಹೋದಂತೆ ದಿನೇ ದಿನೇ ಅವರ ಕಲಿಕಾ ಸಾಮರ್ಥ್ಯ ಹೆಚ್ಚುತ್ತದೆ.
- ಪ್ರತಿ ದಿನ ಕನ್ನಡ ಮತ್ತು ಇಂಗ್ಲಿಷ್‌ನ ಒಂದು ಪುಟ ಕಾಪಿ ಬರೆಯಲು ಹೇಳಿದರೆ ಅವರ ಕೈ ಬರಹ ಸುಧಾರಿಸುತ್ತದೆ. ಬರವಣಿಗೆಯ ವೇಗವೂ ಹೆಚ್ಚುತ್ತದೆ.
- ಮಕ್ಕಳ ಬೌದ್ಧಿಕ ವಿಕಾಸಕ್ಕೆ ಅವರ ಸಾಮರ್ಥ್ಯಕ್ಕನುಗುಣವಾಗಿ ಪದಬಂಧ ಮತ್ತು ಸುಡೊಕು ಬಿಡಿಸಲು ಕಲಿಸಿ.
- ಚಿಕ್ಕಮಕ್ಕಳು ಸುಲಭವಾಗಿ ಕಲಿಯಲು ಮನೆಯಲ್ಲೇ ಫ್ಲ್ಯಾಶ್‌ಕಾರ್ಡ್ಸ್ ತಯಾರಿಸಿ ಅದರ ಮೇಲೆ ಆಕರ್ಷಕ ಚಿತ್ರಗಳನ್ನು ರಚಿಸಿ ಕಲಿಸಬಹುದು. ಈ ತರಹದ ಫ್ಲ್ಯಾಶ್‌ಕಾರ್ಡ್ಸ್ ಸಹಾಯದಿಂದ ಪ್ರಾಣಿಪಕ್ಷಿಗಳ, ಹಣ್ಣು ತರಕಾರಿಗಳ ಹೆಸರುಗಳು, ವ್ಯಾಕರಣ, ವಿರುದ್ಧ ಪದಗಳು ಮುಂತಾದವುಗಳನ್ನು ಸುಲಭವಾಗಿ ಕಲಿಸಬಹುದು. ಅಂಗಡಿಯಲ್ಲಿ ಸಿಗುವ ಚಾರ್ಟ್‌ಗಳನ್ನು ಬಳಸಿ ಮಕ್ಕಳಿಗೆ ಹೊಸ ಹೊಸ ಸಂಗತಿಗಳನ್ನು ಕೂಡ ಪರಿಚಯಿಸಬಹುದು.

ನೆನಪಿರಲಿ, ಈ ಚಟುವಟಿಕೆಗಳು ಮಕ್ಕಳಿಗೆ ಹೊರೆಯಾಗದಂತೆ ನೀವು ಅವರನ್ನು ತೊಡಗಿಸಬೇಕು. ಇದು ಮೋಜಿನ ಕಲಿಕೆ ಆಗಬೇಕೇ ವಿನಃ ಹೊರೆಯಾಗಬಾರದು. ■

## ಗಣಿತ, ವಿಜ್ಞಾನ ಕಲಿಕೆಗೆ...

- ವಿಜ್ಞಾನದ ಸುಲಭ ಪ್ರಯೋಗಗಳನ್ನು ಮಕ್ಕಳೊಂದಿಗೆ ಸೇರಿ ಮಾಡಿದರೆ ಅವರಿಗೂ ಹೊಸತೇನೋ ಕಲಿತ ಖುಷಿ ಸಿಗುತ್ತದೆ. ವಿಜ್ಞಾನದ ಕಠಿಣ ವಿಷಯಗಳನ್ನು ಬಾಯಿಪಾಠ ಮಾಡಿ ಕಲಿಯುವ ಬದಲು ಪ್ರಯೋಗದ ಮೂಲಕ ಕಲಿಯುವ ಹೊಸ ಆಯಾಮ ಮಕ್ಕಳಲ್ಲಿ ಖಂಡಿತ ವಿಜ್ಞಾನದ ಬಗ್ಗೆ ಆಸಕ್ತಿ ಮೂಡಿಸುತ್ತದೆ.
- ಹೆಚ್ಚಿನ ಮಕ್ಕಳಿಗೆ ಗಣಿತವೆಂದರೆ ಕಬ್ಬಿಣದ ಕಡಲೆ. ತಮಗೆ ಕಷ್ಟವಾದ ವಿಷಯವನ್ನು ಕಲಿಯಲು ಮಕ್ಕಳು ಬೇಸರಿಸಿಕೊಳ್ಳುತ್ತಾರೆ. ಕಷ್ಟದ ಗಣಿತವನ್ನು ಸುಲಭವಾಗಿಸಬೇಕಾದರೆ ಅವರಿಗೆ ಗಣಿತದ ಮೂಲಭೂತ ಕ್ರಿಯೆಗಳನ್ನು ಸರಿಯಾಗಿ ಮನದಟ್ಟುಗೊಳಿಸಬೇಕು. ಸಂಕಲನ, ವ್ಯವಕಲನ, ಗುಣಾಕಾರ, ಭಾಗಾಕಾರ, ಸಾಮಾನ್ಯ ಅಪವರ್ತನ, ಲ.ಸಾ.ಅ, ಮ.ಸಾ.ಅ, ಭಿನ್ನರಾಶಿ, ದಶಮಾಂಶ, ಬೀಜಗಣಿತದ ಸುಲಭದ ಒಂದಷ್ಟು ಲೆಕ್ಕಗಳನ್ನು ಅವರ ವಯಸ್ಸಿಗೆ ಮತ್ತು ತರಗತಿಗೆ ಅನುಗುಣವಾಗಿ ಪ್ರತಿದಿನ ಬಿಡಿಸಲು ಹೇಳಿ. ಪ್ರತಿದಿನ ಮಗ್ಗಿ ಹೇಳಿಸುವುದನ್ನು ಮರೆಯಬೇಡಿ. ಸಂಕಲನ, ವ್ಯವಕಲನ, ಗುಣಾಕಾರ, ಭಾಗಾಕಾರದ ವರ್ಕ್‌ಶೀಟ್ ತಯಾರಿಸಿ ಲೆಕ್ಕ ಬಿಡಿಸಲು ಕೊಡಿ. ಇವೆಲ್ಲವೂ ಒಂದೇ ದಿನ ಮಾಡಿಸಬೇಕೆಂದಿಲ್ಲ. ದಿನಕ್ಕೆ ಅರ್ಧ ಅಥವಾ ಒಂದು ಗಂಟೆ ಇವುಗಳಲ್ಲಿ ಯಾವುದಾದರೂ ಒಂದೆರಡು ಚಟುವಟಿಕೆ ಮಾಡಿಸಿ. ಚಟುವಟಿಕೆಗಳು ಮಕ್ಕಳ ಮನಸ್ಸಿಗೆ ಮುದ ನೀಡುವಂತಿರಬೇಕೇ ಹೊರತು ಅವರ ಮನಸ್ಸು ಮುದುಡುವಂತಿರಬಾರದು.
- ನಿತ್ಯ ಜೀವನದ ಉದಾಹರಣೆಯನ್ನು ತೆಗೆದುಕೊಂಡು ಅವರಿಗೆ ವ್ಯಾವಹಾರಿಕವಾಗಿ ಗಣಿತವನ್ನು ಕಲಿಸಬೇಕು. ತರಕಾರಿ ಮತ್ತು ಮನೆಗೆ ಬೇಕಾಗುವ ಸಾಮಗ್ರಿಗಳನ್ನು ತರುವಾಗ ಮಕ್ಕಳನ್ನು ಕರೆದುಕೊಂಡು ಹೋಗಿ. ಎರಡು ಮೂರು ವಸ್ತುಗಳ ದರ ಹೋಲಿಕೆ ಮಾಡುವಾಗ ಲಾಭ ನಷ್ಟದ ಅರಿವು ಮಕ್ಕಳಿಗೆ ಮೂಡುತ್ತದೆ. ಅಲ್ಲಿ ಹಣ ಪಾವತಿ ಮಾಡಿ ಚಿಲ್ಲರೆ ಮರಳಿ ಪಡೆಯುವಾಗ ಮಕ್ಕಳು ತಾನಾಗಿಯೇ ಕೂಡಿ ಕಳೆಯುವ ಲೆಕ್ಕದಲ್ಲಿ ಚತುರರಾಗುತ್ತಾರೆ.